ಕರ್ನಾಟಕ ಸರ್ಕಾರ

**ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ**

ವಾರ್ತಾ ಸೌಧ, ಸಂಖ್ಯೆ : 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಜಂ ನಿ : ಸುಮಪ : 2020–21 : ಜುಲೈ 18, 2020

# ಮಾಧ್ಯಮ ಆಮಂತ್ರಣ

# ಪತ್ರಿಕಾ ಪ್ರಕಟಣೆ

## ಗೌರವದಿಂದ ಅಂತ್ಯ ಸಂಸ್ಕಾರ ಮಾಡಲು ವಕ್ಫ್ ಮಂಡಳಿಯ ಕಟ್ಟುನಿಟ್ಟಿನ ಆದೇಶ

ಬೆಂಗಳೂರು, ಜುಲೈ 18 (ಕರ್ನಾಟಕ ವಾರ್ತೆ):

ಕೋವಿಡ್–19 ಸಾಂಕ್ರಾಮಿಕ ರೋಗದಿಂದ ಮೃತಪಟ್ಟ ಮುಸ್ಲಿಂ ಸಮುದಾಯದ ಶವಗಳನ್ನು ಸಭ್ಯವಾಗಿ ಅಂತ್ಯ ಸಂಸ್ಕಾರ ಮಾಡುವ ಕುರಿತು ಕರ್ನಾಟಕ ರಾಜ್ಯ ಔಖಾಫ್ ಮಂಡಳಿ ಆದೇಶ ಹೊರಡಿಸಿದೆ.

ಕರ್ನಾಟಕ ರಾಜ್ಯದ ವಕ್ಫ್ ನೋಂದಾಯಿತ ಅಥವಾ ನೋಂದಾಯಿಸಲಾಗದೆ ಇರುವ ಖಬರಸ್ತಾನಗಳ ಆಡಳಿತ ಸಮಿತಿಗಳು/ಮುತವಲ್ಲಿಗಳು/ಆಡಳಿತಾಧಿಕಾರಿಗಳು ಕೋವಿಡ್ ಸಾಂಕ್ರಾಮಿಕ ರೋಗದಿಂದ ಮೃತಪಟ್ಟ ಮುಸ್ಲಿಮರ ಶವಸಂಸ್ಕಾರ ಮಾಡುವುದನ್ನು ತಡೆಯಬಾರದು, ಸದರಿ ಕಾರ್ಯಕ್ಕಾಗಿ ನೇಮಿಸಲಾದಂತಹ ನೋಡಲ್ ಅಧಿಕಾರಿಗಳ ಸಹಯೋಗದೊಂದಿಗೆ ಮೃತ ವ್ಯಕ್ತಿಯ ಸಭ್ಯ ಶವ ಸಂಸ್ಕಾರಕ್ಕೆ ಕ್ರಮ ಕೈಗೊಳ್ಳಬೇಕು. ಖಬರಸ್ತಾನಗಳ ಆಡಳಿತ ಸಮಿತಿಗಳ ಪ್ರತಿನಿಧಿಗಳಿಂದ ಅಸಹಕಾರ ಅಥವಾ ತಿರಸ್ಕರಣೆಯನ್ನು ಮೃತ ವ್ಯಕ್ತಿಗೆ ಮಾಡಲಾದ ಅವಮಾನ ಎಂದು ಭಾವಿಸಲಾಗುವುದು.

ಸದರಿ ಆದೇಶದ ಉಲ್ಲಂಘನೆಯು ಭಾರತೀಯ ದಂಡ ಸಂಹಿತೆಯ ನಿಬಂಧನೆಗಳಡಿ ದಂಡನಾತ್ಮಕವಾಗಿರುತ್ತದೆ ಹಾಗೂ ವಕ್ಫ್ ಕಾಯ್ದೆ 1995 ರ ಪ್ರವಾಧಾನಗಳಡಿ ಆಡಳಿತ ಸಮಿತಿಯಿಂದ ಹೊರ ಹಾಕುವ ಷರತ್ತಿಗೊಳ್ಳಪಟ್ಟಿರುತ್ತದೆ.

ಆಯಾ ಜಿಲ್ಲಾ ವಕ್ಫ್ ಅಧಿಕಾರಿಗಳು, ಖಬರಸ್ತಾನಗಳ ಆಡಳಿತ ಸಮಿತಿಗಳಿಗೆ ಸದರಿ ಆದೇಶವನ್ನು ಕಟ್ಟುನಿಟ್ಟಾಗಿ ಪಾಲಿಸಲು ಸೂಕ್ತ ಕ್ರಮ ಕೈಗೊಳ್ಳುವುದು, ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಕೇವಲ ಅನುಪಾಲನೆಯನ್ನು ಹೊರತು ಪಡಿಸಿ ಯಾವುದೇ ರೀತಿಯ ಚರ್ಚೆಗೆ ಆಸ್ಪದ ನೀಡಕೂಡದು, ಈ ಆದೇಶವನ್ನು ಉಲ್ಲಂಘಿಸಿದಲ್ಲಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ಕರ್ನಾಟಕ ರಾಜ್ಯ

ವಕ್ಫ್ ಮಂಡಳಿ ಮುಖ್ಯ ಕಾರ್ಯ ನಿರ್ವಾಹಣಾಧಿಕಾರಿ ಇಸ್ಲಾಹುದ್ದೀನ್. ಜೆ. ಗದ್ಯಾಳ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಅಗ್ನಿಶಾಮಕ ದಳ ವಿಶೇಷ ಕಾರ್ಯಾಚರಣೆ: ಬೆಂಗಳೂರಾದ್ಯಂತ ರೋಗ ನಿರೋಧಕ ಸಿಂಪಡಣೆ

ಬೆಂಗಳೂರು, ಜುಲೈ 18 (ಕರ್ನಾಟಕ ವಾರ್ತೆ):

ನಗರದ ಅಸ್ಪತ್ರೆಗಳು ಹಾಗೂ ಪ್ರಮುಖ ಸರ್ಕಾರಿ ಕಟ್ಟಡಗಳಲ್ಲಿ ರಾಜ್ಯ ಅಗ್ನಿಶಾಮಕ ದಳದಿಂದ ವಿಶೇಷ ವಾಹನಗಳ ಮೂಲಕ ವ್ಯಾಪಕವಾಗಿ ರೋಗ ನಿರೋಧಕ ಔಷಧಿ ಸಿಂಪಡಿಸಲಾಯಿತು.

ಕಳೆದ ಮೂರು ದಿನಗಳಲ್ಲಿ ಬೆಂಗಳೂರಿನ ಎಲ್ಲ ಪ್ರಮುಖ ಅಸ್ಪತ್ರೆಗಳ ಒಳಗೆ ಹಾಗೂ ಸುತ್ತಲಿನ ಪ್ರದೇಶಗಳಲ್ಲಿ ನೂರಾರು ಅಗ್ನಿ ಶಾಮಕ ದಳ ಸಿಬ್ಬಂದಿ ವಿಶೇಷ ವಾಹನಗಳಲ್ಲಿ ಸುಧಾರಿತ ಜೆಟ್ ಮೂಲಕ ರೋಗ ನಿರೋಧಕ ಔಷಧಿಯನ್ನು ಸಿಂಪಡಿಸಿದರು.

ರಾಜ್ಯ ರಾಜಧಾನಿ ಬೆಂಗಳೂರಿನಲ್ಲಿ ಕೊರೋನಾ ಹೆಚ್ಚಳ ಹಿನ್ನೆಲೆ ಲಾಕ್ ಡೌನ್ ಮಾಡಲಾಗಿದ್ದು ಈ ನಡುವೆ ಜನ ಮತ್ತು ವಾಹನಗಳಿಲ್ಲದೆ, ಖಾಲಿ ಇರುವ ಪ್ರಮುಖ ರಸ್ತೆಗಳಲ್ಲಿ ರೋಗ ನಿರೋಧಕ ಔಷಧಿ ಸಿಂಪಡಣೆ ಮಾಡಲಾಯಿತು.

ಈ ಮಧ್ಯೆ ಜನ ಮತ್ತು ವಾಹನಗಳಿಲ್ಲದೆ, ಖಾಲಿ ಇರುವ ಪ್ರಮುಖ ರಸ್ತೆಗಳಲ್ಲಿ ರೋಗ ನಿರೋಧಕ ಔಷಧಿ ಸಿಂಪಡಣೆ ಮಾಡಲಾಯಿತು.

ಕೇವಲ ರಸ್ತೆಗಳಷ್ಟೇ ಅಲ್ಲದೆ, ಪ್ರಮುಖ ಆಸ್ಪತ್ರೆಗಳ ಸರಹದ್ದಿನಲ್ಲೂ ಅಗ್ನಿ ಶಾಮಕದಳದ ಸಿಬ್ಬಂದಿ ಔಷಧಿ ಸಿಂಪಡಣೆ ಮಾಡಿದರು.

ವಿಕ್ಟೋರಿಯಾ ಅಸ್ಪತ್ರೆ, ಬೌರಿಂಗ್ ಅಸ್ಪತ್ರೆ, ಕೆಸಿ ಜನರಲ್ ಅಸ್ಪತ್ರೆ, ಆಕಾಶ್ ಅಸ್ಪತ್ರೆ, ಇಎಸ್ಐ ಅಸ್ಪತ್ರೆ, ಹೈಕೋರ್ಟ್, ವಿ.ವಿ.ಟವರ್ , ಮೆಟ್ರೋ ನಿಲ್ದಾಣ, ಉದ್ಯಾನಗಳು ಸೇರಿದಂತೆ 50ಕ್ಕೂ ಪ್ರದೇಶಗಳಲ್ಲಿ ಅಗ್ನಿಶಾಮಕ ದಳ ಕಾರ್ಯಾಚರಣೆ ನಡೆಸಿ ರೋಗನಿರೋಧಕ ಸಿಂಪಡಣೆ ಮಾಡಿತು.

ಎಡಿಜಿಪಿ ಸುನೀಲ್ ಅಗರ್ ವಾಲ್ , ವಿಕ್ಟೋರಿಯಾ ಆಸ್ಪತ್ರೆ ಬಳಿ ಈ ಕಾರ್ಯಕ್ಕೆ ಚಾಲನೆ ನೀಡಿದರು.

## ಕೊರೊನಾವಿರುದ್ಧಸಮರ:

# ಕೇಂದ್ರದಿಂದ ರಾಜ್ಯಕ್ಕೆ ಎಲ್ಲ ನೆರವು – ಸದಾನಂದಗೌಡ

ಬೆಂಗಳೂರು, ಜುಲೈ 18 (ಕರ್ನಾಟಕ ವಾರ್ತೆ):

ಕೊರೊನಾಮಹಾಮಾರಿಯನ್ನುಮಣಿಸಲುರಾಜ್ಯಸರಕಾರಗಳಿಗೆಪ್ರಧಾನಿಶ್ರೀನರೇಂದ್ರಮೊದಿನೇತೃತ್ವದಭಾರತಸರ್ಕಾರವುಎಲ್ಲನೆರವುನೀಡುತ್ತಿದೆಎಂದುಕೇಂದ್ರರಾಸಾಯನಿಕಹಾಗೂರಸಗೊಬ್ಬರಸಚಿವಶ್ರೀಡಿವಿಸದಾನಂದಗೌಡಹೇಳಿದ್ದಾರೆ.
ಕರ್ನಾಟಕದಲ್ಲಿ ವಿಶೇಷವಾಗಿ ರಾಜ್ಯದ ರಾಜಧಾನಿ ಬೆಂಗಳೂರಿನಲ್ಲಿ ಕೊರೊನಾ ಮಹಾಮಾರಿ ನಿಯಂತ್ರಸುವಕ್ರಮಗಳ ಬಗ್ಗೆ ಚರ್ಚಿಸಲು ಮುಖ್ಯಮಂತ್ರಿ ಶ್ರೀ ಬಿ ಎಸ್ ಯಡಿಯೂರಪ್ಪ ಅವರು ಇಂದು ಬೆಂಗಳೂರಿನಲ್ಲಿ ನಡೆಸಿದ ಸಚಿವರು, ಸಂಸದರುಮತ್ತುಅಧಿಕಾರಿಗಳ ಸಭೆಯಲ್ಲಿ ಪಾಲ್ಗೊಂಡಸಚಿವರುಪತ್ರಿಕಾಹೇಳಿಕೆಯೊಂದನ್ನುಬಿಡುಗಡೆಮಾಡಿದರು.

ಕೊರೊನಾವಿರುದ್ಧದಹೋರಾಟದವಿಚಾರವಾಗಿ ಕೇಂದ್ರ ಸರ್ಕಾರವು ರಾಜ್ಯಾಡಳಿತದೊಂದಿಗೆ ಸತತ ಸಂಪರ್ಕದಲ್ಲಿದ್ದು ಅಗತ್ಯ ನೆರವು ನೀಡುತ್ತಿದೆ. ಇನ್ನೂ ಏನೆಲ್ಲ ಅಗತ್ಯವೋ ಅದನ್ನು ಮಾಡಲು ನಾವು ಸಿದ್ಧರಿದ್ದೇವೆಎಂದರು.

"ಔಷಧೋದ್ಯಮವೂನನ್ನ ಇಲಾಖೆಯಅಧೀನದಲ್ಲಿಯೇಬರುತ್ತದೆ. ಹಾಗಾಗಿನಾನುಪ್ರತಿದಿನಖುದ್ದಾಗಿಔಷಧಉತ್ಪಾದನೆ, ವಿತರಣೆಹೇಗಾಗುತ್ತಿದೆಎಂದುಪರಿಶೀಲಿಸುತ್ತೇನೆ. ಈ ವಿಚಾರದಲ್ಲಿಸದಾನಿಗಾಇಡಲಾಗುತ್ತದೆ. ಕರ್ನಾಟಕವೂಸೇರಿದಂತೆಎಲ್ಲರಾಜ್ಯಗಳಲ್ಲಿಹೈಡ್ರೊಕ್ಸಿಕ್ಲೋರೋಕ್ವಿನ್, ಪೆರಾಸೆಟಾಮೊಲ್ನಂತಾದಔಷಧಗಳುಸಾಕಷ್ಟುದಾಸ್ತಾನಿದೆ. ಹಾಗೆಯೇದೇಶಾದ್ಯಂತಇರುವನಮ್ಮ ಇಲಾಖೆಯಜನೌಷಧಿಕೇಂದ್ರಗಳಲ್ಲಿಯೂಸಾಕಷ್ಟುಪ್ರಮಾಣದಲ್ಲಿಜೀವರಕ್ಷಕಔಷಧಗಳುಲಭ್ಯವಿವೆ. ಕರ್ನಾಟಕರಾಜ್ಯವೊಂದರಲ್ಲೇ 600ಕ್ಕಿಂತ ಹೆಚ್ಚುಜನೌಷಧಿಕೇಂದ್ರಗಳುಕಾರ್ಯನಿರ್ವಹಿಸುತ್ತಿವೆ." ಎಂದುಶ್ರೀಸದಾನಂದಗೌಡಹೇಳಿದರು.

"ಔಷಧಗಳಕೊರತೆ, ಕಾಳಸಂತೆಯಂತಹಏನಾದರುದೂರುಗಳಿದ್ದರೆನಮ್ಮಜನೌಷಧಿಸಹಾಯವಾಣಿಸಂಖ್ಯೆ 18001808080 ಅಥವಾಎನ್.ಪಿ.ಪಿ.ಎ. ಸಹಾಯವಾಣಿ 18001112550 / 011-23345118 / 011-23345122 ನಂಬರುಗಳಿಗೆಕರೆಮಾಡಬಹುದು. ಅಥವಾಖುದ್ದುನನ್ನಗಮನಕ್ಕೂತರಬಹುದು. ಏನೇಸಮಸ್ಯೆಯಿದ್ದರೂಅದನ್ನು ಇತ್ಯರ್ಥಪಡಿಸಲಾಗುವುದು" ಎಂದುಸಚಿವರುಭರವಸೆನೀಡಿದರು.

“ಅದೇರೀತಿಸರ್ಕಾರಿಅಥವಾಖಾಸಗಿಸಂಸ್ಥೆಗಳುತುರ್ತುಔಷಧ, ವೈದ್ಯಕೀಯಉಪಕರಣಗಳಆಮದುಮಾಡಿಕೊಳ್ಳುವವಿಚಾರವಾಗಿತೊಡಕುಗಳುಇದ್ದರೆನಮ್ಮ ಇಲಾಖೆಯಅಥವಾನನ್ನಗಮನಕ್ಕೆತರಬಹುದು. ಅಗತ್ಯಅನುಮತಿಯನ್ನುಸ್ವಲ್ಪವೂವಿಳಂಬವಿಲ್ಲದೆದೊರಕಿಸಿಕೊಡಲಾಗುವುದು” ಎಂದೂಅವರುಹೇಳಿದರು.

“ನಾವ್ಯಾರೂ ಇದುವರೆಗೆ ಕಂಡು ಕೇಳರಿಯದ ಮಹಾಮಾರಿ ಕೊರೊನಾ ರೋಗವು ಜಗತ್ತಿನ ಆರೋಗ್ಯ, ಆರ್ಥಿಕ ವ್ಯವಸ್ಥೆಯನ್ನೇಬುಡಮೇಲು ಮಾಡಿದೆ. ನಾವೆಲ್ಲ ಒಟ್ಟಾಗಿ ಸಂಘಟಿತ ಪ್ರಯತ್ನ ಮಾಡಿದಾಗಲೇ ಇದನ್ನು ಮಣಿಸಲು ಸಾಧ್ಯ. ಸಾರ್ವಜನಿಕರೂ ಈ ಹೋರಾಟದಲ್ಲಿ ಕೈಜೋಡಿಸಬೇಕು.ಕೇಂದ್ರಹಾಗೂರಾಜ್ಯಸರ್ಕಾರಗಳು, ವೈದ್ಯರುಸೇರಿದಂತೆಕೊರೊನಾಯೋಧರಜತೆ ಎಲ್ಲ ರೀತಿಯಿಂದ ಸಹಕರಿಸಿ ಎಂದು ವಿನಂತಿಸುತ್ತೇನೆ” ಎಂದುಸದಾನಂದಗೌಡತಿಳಿಸಿದರು.

## COVID-19:Centre to help Karnataka overcoming COVID crisis – DVS

Bengaluru, July 17 (Karnataka Information)- Union Minister for Chemicals and Fertilizers Sri D V Sadananda Gowda has said -Governmentof India headed by Prime Minister Sri Narendra Modi has been extending all possible assistance to state governments in their endeavour to combat the deadlyCorona virus.

In a statement released after participating in a high level meeting chaired by Chief Minister Sri B S Yeddyurappa in Bengaluru today, Mr. Gowda said he shared his views with the State Government on how to control the spread of COVID-19 in the State in general and Bengaluru in particular.
He said the Centrewas in constant touch with theState Government on the issue.The Centre is more than happy to extend any help further if Karnataka requires so.

He said – “Being a Union Ministerhandling Pharmaceutical Dept also,I am closely monitoring the medicine demand and supply situationacross the country on day-to-day basis. The availability ofrequiredmedicinesincluding HCQ&Paracetamolis satisfactory in all states including Karnataka. Also, there has been enough lifesaving drugs in our Jan Aushadhikendrasall over India. Over 600 suchoutlets exist in Karnataka alone”.

“If there is any issue related to medicine shortage or overpricing, one can bring it to my knowledge or callPMBJP tollfree number 18001808080 orNPPA number 18001112550 / 011-23345118/011-23345122. The grievances will surely be resolved to everybody’s satisfaction” he asserted

With related tostate governments or private agencies seeking toimport emergency medicines, medical equipment etc., Mr Gowda assured, we would facilitate required licences without any delay.
The Union Minister said – “I strongly feel that it is our collective responsibility to use everything in our armour to defeat the pandemic.We also seek public support in this mission. Together, we will win”